# ಪಯಣ

ಮರಿಹಕ್ಕಿಗಳು
ರೆಕ್ಕೆ ಬಲಿತು
ಹಾರಿ ಹೋಗಿವೆ

ಕನಸುಗಳನ್ನು
ತಟ್ಟೆಯಲ್ಲಿಟ್ಟು
ಮಾರುತ್ತಿದ್ದೇವೆ

ಬದುಕಿನ
ಬೀದಿ ಝುಳಕ್ಕೆ
ರೊಟ್ಟಿ ಸುಡುತ್ತಿದ್ದೇವೆ

ಬೆಂದ ಸುಕ್ಕುಗಳಿಗೂ
ನಿರೀಕ್ಷೆಯ ನಗು
ತುದಿಗಾಲಲ್ಲಿ
ಕಾಯುವ ಕುತೂಹಲ

ಪಯಣ
ಯಾರಿಗೂ ಕಾಯುತ್ತಿಲ್ಲ

**ಸಾವಿತ್ರಿ ಮುಜುಮದಾರ**

# ಸಂತೃಪ್ತಿ

ಹೊತ್ತೊತ್ತಿಗೂಟ
ರೊಟ್ಟಿ ಗಟ್ಟಿ
ಬಿಡುವೇ ಒಡವೆ
ನಮ್ಮ ನಡುವೆ

ಬಾಳ ದಾರಿಯೊಳಗೆ
ರಸದ ಘಳಿಗೆ
ಸ್ಥಾವರಕ್ಕಳಿವುಂಟು
ಜಂಗಮಕ್ಕಿಲ್ಲ

ಇಹದ ಮೋಹ
ಇಂಗದ ದಾಹ
ತೃಪ್ತ ನಲಿವು
ಒಲವೇ ಗೆಲುವು

ಬಾಳಬಂಡಿಗಾರು ಚಕ್ರ
ನಿಂತದ್ದೇ ಊರು
ಆಗಸವೇ ಸೂರು
ದುಡಿಮೆ ಬೆವರೇ ಉಸಿರ ಸೂತ್ರ

ಸಿಕ್ಕುಸುಕ್ಕುಗಳ ಆಳದಲ್ಲಿ
ಕಾಣುತಿಹುದದ್ಯಾವ ಛಾಯೆ?
ಹುಡುಕಿದಷ್ಟೂ ಸಿಗುವುದಷ್ಟೇ
ಬರೀ ... ಪ್ರೀತಿ ಮಾಯೆ!

**ರವಿಶಂಕರ್ ಎನ್.**

